# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ** : 2022-23 ನೇ ಸಾಲಿಗೆ ಗಂಗಾ ಕಲ್ಯಾಣ ಯೋಜನೆಯನ್ನು ಡಿಬಿಟಿ ಮೂಲಕ ಅನುಷ್ಠಾನ ಮಾಡುವ ಕುರಿತು ಹಾಗೂ ಸ್ವಯಂ ಉದ್ಯೋಗ ಯೋಜನೆಯಡಿ ದ್ವಿಚಕ್ರ ವಾಹನಗಳನ್ನು ಖರೀದಿಸಿ ಫಲಾನುಭವಿಗಳಿಗೆ ನೀಡುವ ಯೋಜನೆಯನ್ನು ಮಾನ್ಯ ಮುಖ್ಯಮಂತ್ರಿಗಳವರಿಂದ ಚಾಲನೆ ನೀಡುವ ಕಾಯಕ್ರಮವನ್ನು ಫೆಬ್ರುವರಿ 2023 ರ ಎರಡನೇ ವಾರದಲ್ಲಿ ಹಮ್ಮಿಕೊಳ್ಳುವ ಬಗ್ಗೆ.

**ಉಲ್ಲೇಖ** 1 ದಿನಾಂಕ 02-02-2023 ರಂದು ಮಾನ್ಯ ಮುಖ್ಯಮಂತ್ರಿಗಳವರ ಅಧ್ಯಕ್ಷತೆಯಲ್ಲಿ ನಡೆದ ಬಜೆಟ್ ಪೂರ್ವ ಬಾವಿ ಸಭೆಯಲ್ಲಿ ನೀಡಿದ ನಿರ್ದೇಶನಗಳಂತೆ.

2 ದಿನಾಂಕ 02-02-2023 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಚರ್ಚಿಸಿದಂತೆ.

******

**ಪ್ರಸ್ತಾವನೆ:**

ಮೇಲ್ಕಂಡ ವಿಷಯಕ್ಕೆ ಸಂಭಂದಿಸಿದಂತೆ ಉಲ್ಲೇಖ (1) ರ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳವರು 2022-23 ನೇ ಸಾಲಿಗೆ ಗಂಗಾ ಕಲ್ಯಾಣ ಯೋಜನೆಯನ್ನು ಡಿಬಿಟಿ ಮೂಲಕ ಅನುಷ್ಠಾನ ಮಾಡುವ ಕುರಿತು ಹಾಗೂ ಸ್ವಯಂ ಉದ್ಯೋಗ ಯೋಜನೆಯಡಿ ದ್ವಿಚಕ್ರವಾಹನಗಳನ್ನು ಖರೀದಿಸಿ ಫಲಾನುಭವಿಗಳಿಗೆ ನೀಡುವ ಯೋಜನೆಗಳಿಗೆ ಚಾಲನೆ ನೀಡುವ ಕಾಯಕ್ರಮವನ್ನು ಫೆಬ್ರುವರಿ 2023 ರ ಎರಡನೇ ವಾರದಲ್ಲಿ ಹಮ್ಮಿಕೊಳ್ಳುವಂತೆ ಸೂಚನೆ ನೀಡಿರುತ್ತಾರೆ ಹಾಗೂ ಯೋಜನೆಯನ್ನು ತ್ವರಿತವಾಗಿ ಅನುಷ್ಠಾನ ಮಾಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿರುತ್ತಾರೆ.

ಅದರಂತೆ ಗಂಗಾ ಕಲ್ಯಾಣ ಯೋಜನೆಯನ್ನು ತ್ವರಿತವಾಗಿ ಅನುಷ್ಠಾನ ಮಾಡುವ ಕುರಿತು ಹಾಗೂ ದ್ವಿಚಕ್ರವಾಹನಗಳನ್ನು ಫಲಾನುಭವಿಗಳಿಗೆ ಒದಗಿಸುವ ಬಗ್ಗೆ ಉಲ್ಲೇಖ (2) ರ ಸಭೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಅಧೀನದ ನಿಗಮಗಳ ವ್ಯವಸ್ಥಾಪಕ ನಿರ್ದೇಶಕರುಗಳು ಮತ್ತು ಕೊಳವೆ ಬಾವಿ ಕೊರೆಯುವ ಗುತ್ತಿಗೆದಾರರೊಂದಿಗೆ ವಿವರವಾಗಿ ಚರ್ಚಿಸಲಾಯಿತು. ಕೊಳವೆ ಬಾವಿಗಳನ್ನು ತ್ವರಿತವಾಗಿ ಕೊರೆಯಲು ಕೆಲವೊಂದು ಅಂಶಗಳ ಕುರಿತು ವಿಳಂಬ ಆಗುವುದರಿಂದ ಅಂದರೆ ಭೂ ಭೌತ ಸಮೀಕ್ಷೆ ಮಾಡಿಸುವುದು, ತಾಲೂಕು ಅಭಿವೃದ್ಧಿ ಅಧಿಕಾರಿಗಳು ಏಕ ಕಾಲಕ್ಕೆ ಎಲ್ಲಾ ಕಡೆ ಖುದ್ದಾಗಿ ಹಾಜರಾಗಿ ಕೊಳವೆ ಬಾವಿ ಕೊರೆಯುವುದನ್ನು ಪರಿಶೀಲಿಸಲು ಆಗದೇ ಇರುವುದು, ಟರ್ನ್ ಕೀ ಆಧಾರದಲ್ಲಿ ಕೊಳವೆ ಬಾವಿ ಕೊರೆದು, ಪಂಪ್ ಸೆಟ್ ಸರಬರಾಜು ಮಾಡಿದರೂ ವಿದ್ಯುತ್ ಸಂಪರ್ಕ ಪಡೆಯಲು ಆಗುತ್ತಿರುವ ತೊಂದರೆಗಳು (ಇಂಧನ ಇಲಾಖೆಯ ಗಂಗಾ ಕಲ್ಯಾಣ ಯೋಜನೆ ಪೋರ್ಟಲ್ ನಲ್ಲಿ ನೊಂದಾಯಿಸಲು ತಾಂತ್ರಿಕ ಸಮಸ್ಯೆಗಳು) ಇತ್ಯಾದಿ ಅಂಶಗಳಿಂದ ವಿಳಂಬ ಆಗುತ್ತಿದೆ. ಇವುಗಳನ್ನು ಕಡ್ಡಾಯ ಮಾಡದೇ ಇದ್ದಲ್ಲಿ, ನಾವು ಹೆಚ್ಚುವರಿ ರಿಗ್‌ಗಳನ್ನು ಪಡೆದು ಪ್ರತಿ ದಿನ ಸುಮಾರು 500 ಕೊಳವೆಬಾವಿಗಳನ್ನು ರಾಜ್ಯಾದ್ಯಂತ ಕೊರೆಯಬಹುದಾಗಿದೆ ಎಂದು ಗುತ್ತಿಗೆದಾರರು ತಿಳಿಸಿರುತ್ತಾರೆ.

Scanned with CamScanner

ಮುಂದುವರೆದು ಸ್ವಯಂ ಉದ್ಯೋಗ ಯೋಜನೆಯಡಿ ಅರ್ಹ ಫಲಾನುಭವಿಗಳಿಗೆ ದ್ವಿಚಕ್ರವಾಹಗಳನ್ನು ನೀಡುವ ಕುರಿತು ಫಲಾನುಭವಿಗಳ ಆಯ್ಕೆ ಆಗದಿರುವುದು,ಆನ್ ಲೈನ್ ನಲ್ಲಿ ಅರ್ಜಿ ಹಾಕದೇ ಇರುವ ಫಲಾನುಭವಿಗಳನ್ನು ಶಾಸಕರು ಆಯ್ಕೆ ಮಾಡಿ ನೀಡಿರುವುದು ಇತ್ಯಾದಿ ಅಂಶಗಳ ಬಗ್ಗೆ ಚರ್ಚಿಸಲಾಯಿತು.

ಮಾನ್ಯ ಮುಖ್ಯಮಂತ್ರಿಗಳವರ ನಿರ್ದೇಶನಗಳಂತೆ 2023 ರ ಫೆಬ್ರುವರಿ ಎರಡನೇ ವಾರದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಗಂಗಾ ಕಲ್ಯಾಣ ಯೋಜನೆಯ 10,000 ಫಲಾನುಭವಿಗಳಿಗೆ ಮೊದಲಕಂತಿನಲ್ಲಿ ರೂ 25,000/- ಗಳ ಸಹಾಯಧನವನ್ನು e-Rupi Voucher ಮೂಲಕ ಮುಂಗಡವಾಗಿ ಬಿಡುಗಡೆ ಮಾಡುವ ಬಗ್ಗೆ ಹಾಗೂ 20,000 ಫಲಾನುಭವಿಗಳಿಗೆ ದ್ವಿಚಕ್ರವಾಹನವನ್ನು ಖರೀದಿಸಿ ನೀಡುವ ಬಗ್ಗೆ ತ್ವರಿತವಾಗಿ ಕ್ರಮವಹಿಸಬೇಕಾಗಿರುವುದರಿಂದ ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಸಕಇ 399 ಎಸ್‌ಡಿಸಿ 2022 ಬೆಂಗಳೂರು</u>**

**<u>ದಿನಾಂಕ: 03-02-2023</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2023 ರ ಫೆಬ್ರುವರಿ ಎರಡನೇ ವಾರದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಗಂಗಾ ಕಲ್ಯಾಣ ಯೋಜನೆಯ 10,000 ಫಲಾನುಭವಿಗಳಿಗೆ ಮೊದಲಕಂತಿನಲ್ಲಿ ರೂ 25,000/- ಗಳ ಸಹಾಯಧನವನ್ನು e-Rupi Voucher ಮೂಲಕ ಮುಂಗಡವಾಗಿ ಬಿಡುಗಡೆ ಮಾಡುವ ಬಗ್ಗೆ ಹಾಗೂ ಸ್ವಯಂ ಉದ್ಯೋಗ ಯೋಜನೆಯಡಿ 20,000 ಫಲಾನುಭವಿಗಳಿಗೆ ದ್ವಿಚಕ್ರವಾಹನವನ್ನು ಖರೀದಿಸಿ ನೀಡುವ ಬಗ್ಗೆ ತ್ವರಿತವಾಗಿ ಕ್ರಮವಹಿಸಲು ಈ ಕೆಳಕಂಡ ಕ್ರಮಗಳನ್ನು ಅನುಸರಿಸಿ ತ್ವರಿತವಾಗಿ ಅನುಷ್ಠಾನ ಮಾಡಲು ಆದೇಶಿಸಿದೆ.

1. ಆಯಾ ವಿಧಾನ ಸಭಾ ಕ್ಷೇತ್ರಗಳ ಶಾಸಕರ ಅಧ್ಯಕ್ಷತೆಯಲ್ಲಿನ ಸಮಿತಿಯಲ್ಲಿ ಫಲಾನುಭವಿಗಳ ಆಯ್ಕೆಯನ್ನು ತ್ವರಿತವಾಗಿ ಪೂರ್ಣಗೊಳಿಸುವುದು.
2. ಸ್ವಯಂ ಉದ್ಯೋಗ ಯೋಜನೆಯಡಿ (ದ್ವಿಚಕ್ರ ವಾಹನ) ನಿಗಧಿತ ಗುರಿಯಂತೆ ಆನ್ ಲೈನ್ ನಲ್ಲಿ ಅರ್ಜಿಗಳು ಸ್ವೀಕೃತವಾಗದೇ ಇದ್ದಲ್ಲಿ, ಆಯ್ಕೆ ಸಮಿತಿಯು ಆಯ್ಕೆ ಮಾಡಿದ ಅರ್ಹ ಫಲಾನುಭವಿಗಳಿಂದ ಭೌತಿಕವಾಗಿ (Manual) ಅರ್ಜಿಗಳನ್ನು ಪಡೆದು ಸೌಲಭ್ಯ ನೀಡುವುದು.ಸಮಾಜ ಕಲ್ಯಾಣ ಇಲಾಖೆಯ ಅಧೀನದ ಒಂದು ನಿಗಮಕ್ಕೆ ಸಂಭಂದಿಸಿದಂತೆ ಆಯಾ ವಿಧಾನ ಸಭಾ ಕ್ಷೇತ್ರಕ್ಕೆ ನಿಗಧಿಪಡಿಸಿದ ಗುರಿಯಂತೆ ಹೆಚ್ಚಿನ ಅರ್ಜಿಗಳು ಬಾರದೇ ಇದ್ದಲ್ಲಿ, ಉಳಿದ ನಿಗಮಗಳಿಗೆ ಸಂಭಂದಿಸಿದ ಪ.ಜಾತಿಯ ಫಲಾನುಭವಿಗಳನ್ನು ಆಯ್ಕೆ ಮಾಡಿ ನೀಡುವುದು. ಈ ಯೋಜನೆಗೆ ತಗುಲುವ ವೆಚ್ಚವನ್ನು ಆಯಾ ನಿಗಮಗಳಲ್ಲಿ ಸ್ವಯಂ ಉದ್ಯೋಗ ಯೋಜನೆಗೆ ಒದಗಿಸಿರುವ ಅನುದಾನದಲ್ಲಿ ಭರಿಸುವುದು.

Scanned with CamScanner

3. ಗಂಗಾ ಕಲ್ಯಾಣ ಯೋಜನೆಯಡಿ 2017-18ಮತ್ತು ಅದಕ್ಕಿಂತ ಹಿಂದಿನ ವರ್ಷಗಳಲ್ಲಿ ಆಯ್ಕೆಯಾಗಿ ವಿವಿಧ ಕಾರಣಗಳಿಂದ ಕೊಳವೆ ಬಾವಿ ಕೊರೆಯದೇ ಇದ್ದಲ್ಲಿ, ಕೊಳವೆ ಬಾವಿ ಕೊರೆದಿದ್ದರೂ ಪಂಪ್ ಸೆಟ್ ಸರಬರಾಜು ಮಾಡದೇ ಇದ್ದಲ್ಲಿ ಅಂತಹ ಎಲ್ಲಾ ಫಲಾನುಭವಿಗಳಿಗೆ ಡಿಬಿಟಿ ಮೂಲಕವೇ ಕೊಳವೆ ಬಾವಿ ಕೊರೆಯಿಸುವುದು ಹಾಗೂ ಪಂಪ್ ಸೆಟ್ ಸರಬರಾಜು ಮಾಡುವುದು. **ಇಂತಹ ಪ್ರಕರಣಗಳನ್ನು ಪ್ರಸ್ತುತ ಚಾಲ್ತಿಯಲ್ಲಿರುವ ಘಟಕ ವೆಚ್ಚದಲ್ಲಿಯೇ ಸೌಲಭ್ಯ ಒದಗಿಸುವುದು.**
4. 2018-19 ನೇ ಸಾಲಿನ ಆಯ್ಕೆಯಾಗಿ ವಿವಿಧ ಕಾರಣಗಳಿಂದ ಕೊಳವೆ ಬಾವಿ ಕೊರೆಯದೇ ಇದ್ದಲ್ಲಿ, ಕೊಳವೆ ಬಾವಿ ಕೊರೆದಿದ್ದರೂ ಪಂಪ್ ಸೆಟ್ ಸರಬರಾಜು ಮಾಡದೇ ಇದ್ದಲ್ಲಿ ಅಂತಹ ಎಲ್ಲಾ ಫಲಾನುಭವಿಗಳಿಗೆ ಡಿಬಿಟಿ ಮೂಲಕವೇ ಕೊಳವೆ ಬಾವಿ ಕೊರೆಯಿಸುವುದು ಹಾಗೂ ಪಂಪ್ ಸೆಟ್ ಸರಬರಾಜು ಮಾಡುವುದು.
5. **2019-20 ಮತ್ತು 2020-21 ನೇ ಸಾಲಿನ (TURN KEY) ಗುರಿಗಳಿಗೆ ಸಂಭಂದಿಸಿದಂತೆ ಬಿಡ್ ಕೆಪಾಸಿಟಿ ಮೀರಿ ಹೆಚ್ಚಿನ ಗುರಿ ಪಡೆದ ಗುತ್ತಿಗೆದಾರರ ಪ್ಯಾಕೇಜ್ ಗಳನ್ನು ಟೆಂಡರ್ ಮೇಲ್ಮನವಿ ಪ್ರಾಧಿಕಾರಿಗಳು ರದ್ದುಪಡಿಸಿದ್ದು, ಸದರಿ ಗುತ್ತಿಗೆದಾರರು ಕೊಳವೆ ಬಾವಿ ಕೊರೆದಿರುವ ಪ್ರಕರಣ ಹೊರತುಪಡಿಸಿ ಉಳಿದ ಗುರಿಗಳನ್ನು ಡಿಬಿಟಿ ಮೂಲಕ ಅನುಷ್ಠಾನ ಮಾಡುವುದು.**
6. ಗಂಗಾ ಕಲ್ಯಾಣ ಯೋಜನೆಯಡಿ ಆಯ್ಕೆಯಾದ ಅರ್ಹ ಫಲಾನುಭವಿಗಳು ಸ್ವ ಇಚ್ಛೆಯಿಂದ ಆಯ್ಕೆಮಾಡಿದ ಕೊಳವೆ ಬಾವಿ ಕೊರೆಯುವ ಗುತ್ತಿಗೆದಾರರನ್ನು ಹಾಗೂ ಪಂಪ್ ಸೆಟ್ ಸರಬರಾಜು ಮಾಡುವ ಗುತ್ತಿಗೆದಾರರನ್ನು ತಂತ್ರಾಂಶದಲ್ಲಿ Map ಮಾಡುವುದು ತಾಲೂಕು ಅಭಿವೃದ್ಧಿ ಅಧಿಕಾರಿಗಳ ಕರ್ತವ್ಯ ಆಗಿದ್ದು, ಆದ್ಯತೆ ಮೇರೆಗೆ ಕ್ರಮವಹಿಸುವುದು. ಈ ಹಂತದಲ್ಲಿ ನಿರ್ಲಕ್ಷತೆ ವಹಿಸುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು.
7. ತಾಲೂಕು ಅಭಿವೃದ್ಧಿ ಅಧಿಕಾರಿಗಳು ಏಕ ಕಾಲಕ್ಕೆ ಎಲ್ಲಾ ಕಡೆ ಖುದ್ದಾಗಿ ಹಾಜರಾಗಿ ಕೊಳವೆ ಬಾವಿ ಕೊರೆಯುವುದನ್ನು ಪರಿಶೀಲಿಸಲು ಆಗದೇ ಇರುವುದರಿಂದ ಗುತ್ತಿಗೆದಾರರು, ಫಲಾನುಭವಿಗಳು ಅಥವಾ ಅವರ ರಕ್ತ ಸಂಭಂದಿಗಳ ಜೊತೆ ಇರುವ ಜಿಪಿಎಸ್ ಫೋಟೋಗಳನ್ನು ಗುತ್ತಿಗೆದಾರರೇ ಅಪ್ ಲೋಡ್ ಮಾಡುವುದು.
8. 2019-20 ಮತ್ತು 2020-21 ನೇ ಸಾಲಿನ ಟರ್ನ್ ಕೀ ಆಧಾರದಲ್ಲಿ ಕೊಳವೆ ಬಾವಿ ಕೊರೆದು, ಪಂಪ್ ಸೆಟ್ ಸರಬರಾಜು ಮಾಡಿದರೂ ವಿದ್ಯುತ್ ಸಂಪರ್ಕ ಪಡೆಯಲು ಆಗುತ್ತಿರುವ ತೊಂದರೆಗಳು (ಇಂಧನ ಇಲಾಖೆಯ ಗಂಗಾ ಕಲ್ಯಾಣ ಯೋಜನೆ ಪೋರ್ಟಲ್ ನಲ್ಲಿ ನೊಂದಾಯಿಸಲು ತಾಂತ್ರಿಕ ಸಮಸ್ಯೆಗಳು) ಕುರಿತು ಇಂಧನ ಇಲಾಖೆಯೊಂದಿಗೆ ಚರ್ಚಿಸಿ Manual ಆಗಿ ಸಂಭಂದಿಸಿದ ಎಸ್ಕಾಂಗಳಿಗೆ ನೊಂದಣಿ ಮಾಡಿಕೊಳ್ಳಲು ಅರ್ಜಿ ಸಲ್ಲಿಸಿ ವಿದ್ಯುತ್ ಸಂಪರ್ಕ ಪಡೆಯುವ ಬಗ್ಗೆ ಸರ್ಕಾರದವತಿಯಿಂದ ಕ್ರಮವಹಿಸಲಾಗುವುದು.

Scanned with CamScanner

9. ಸರ್ಕಾರವು ಈಗಾಗಲೇ ನೀಡಿದ ನಿರ್ದೇಶನಗಳಂತೆ ಕೊಳವೆ ಬಾವಿ ಕೊರೆದ/ಪಂಪ್ ಸೆಟ್ ಸರಬರಾಜು ಮಾಡಿದ ಕುರಿತು ಗುತ್ತಿಗೆದಾರರು ಸ್ಫಟಿಕ ತಂತ್ರಾಂಶದಲ್ಲಿ ಬಿಲ್ಲುಗಳನ್ನು ಸಲ್ಲಿಸಿದ 15 ದಿನಗಳ ಒಳಗಾಗಿ ಪಾವತಿಸುವುದು.
10. 2023 ರ ಫೆಬ್ರುವರಿ ಎರಡನೇ ವಾರದಲ್ಲಿ ನಡೆಯಲಿರುವ ಕಾರ್ಯಕ್ರಮದ ಆಯೋಜನೆಯ ಸಂಪೂರ್ಣ ಉಸ್ತುವಾರಿಯನ್ನು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ಇವರಿಗೆ ವಹಿಸಿ ಆದೇಶಿಸಿದೆ. ಈ ಬಗ್ಗೆ ಅಗತ್ಯ ರೂಪು ರೇಷೆಗಳನ್ನು ಮತ್ತು ತಗುಲುವ ವೆಚ್ಚದ ವಿವರಗಳನ್ನು ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆ ಪಡೆದು ಸಮರ್ಪಕವಾಗಿ ಅನುಷ್ಠಾನ ಮಾಡುವುದು. ಇದಕ್ಕೆ ಉಳಿದ ನಿಗಮಗಳ ವ್ಯವಸ್ಥಾಪಕ ನಿರ್ದೇಶಕರುಗಳು ಅಗತ್ಯ ಸಹಕಾರ ನೀಡತಕ್ಕದ್ದು.
11. ಜಿಲ್ಲಾ ಮಟ್ಟದಲ್ಲಿ ಈ ಎರಡೂ ಕಾರ್ಯಕ್ರಮಗಳ ಅನುಷ್ಠಾನದ ಉಸ್ತುವಾರಿಯನ್ನು ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರಿಗೆ ವಹಿಸಿದೆ. ಉಳಿದ ನಿಗಮಗಳ ಜಿಲ್ಲಾ ವ್ಯವಸ್ಥಾಪಕರು ಅಗತ್ಯ ಸಹಕಾರ ನೀಡತಕ್ಕದ್ದು.
12. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಇವರಿಗೆ ಅಗತ್ಯ ವಿವರಗಳನ್ನು ನೀಡಲು ಶ್ರೀ ನಾಗರಾಜ್ ಟಿ. ಪೂಜಾರ್, ವಿಶೇಷ ಕರ್ತವ್ಯ ಅಧಿಕಾರಿಗಳು (ಗಂಗಾ ಕಲ್ಯಾಣ ಯೋಜನೆ) ಮತ್ತು ಶ್ರೀ ಅಶ್ವಿನ್ ಬಿ.ಎಸ್, ಯೋಜನಾ ಸಮಾಲೋಚಕರು (ಸ್ವಯಂ ಉದ್ಯೋಗ-ದ್ವಿಚಕ್ರವಾಹನ) ಇವರನ್ನು ನೇಮಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

3.2.2023

(ವಿ.ಪ್ರಕಾಶ್)
ಸರ್ಕಾರದ ಉಪ ಕಾರ್ಯದರ್ಶಿ-3
ಸಮಾಜ ಕಲ್ಯಾಣ ಇಲಾಖೆ.

ಇವರಿಗೆ:

1. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
2. ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಡಾ ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಬೆಂಗಳೂರು

Scanned with CamScanner

6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ ಬೆಂಗಳೂರು.
7. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ ಬೆಂಗಳೂರು
8. ಮುಖ್ಯ ಅಭಿಯಂತರರು, ಆರ್.ಡಿ.ಪಿ.ಆರ್(ಗ್ರಾಮೀಣ ಕುಡಿಯುವ ನೀರು ಸರಬರಾಜು ವಿಭಾಗ, ಬೆಂಗಳೂರು)0
9. ಜಿಲ್ಲಾಧಿಕಾರಿಗಳು, ಎಲ್ಲಾ ಜಿಲ್ಲೆಗಳು.
10. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಎಲ್ಲಾ ಜಿಲ್ಲೆಗಳು.
11. ಉಪ ಪ್ರಧಾನ ವ್ಯವಸ್ಥಾಪಕರು, ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಕಲಬುರಗಿ ವಿಭಾಗ.
12. ಜಿಲ್ಲಾ ವ್ಯವಸ್ಥಾಪಕರು, ಎಲ್ಲಾ ಜಿಲ್ಲೆಗಳು.
13. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ

ಪ್ರತಿ ಮಾಹಿತಿಗಾಗಿ:-

1. ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು
2. ಮಾನ್ಯ ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು

Scanned with CamScanner